113

ಬೇಡನ ಮಗಳು

(ಪೌರಾಣಿಕ-ಏಕಾಂಕ ರೂಪಕ)

ರಚಯಿತರು:

ಶ್ರೀ। ವೆಂಕಟರಾಜ ಪುಣಿಂಚತ್ತಾಯ,

ಪುಂಡೂರು.

1956.

ಒಂದಾಣೆ ANNA 1 ಮಾಲೆ

ಬೇಡರ ಮಗಳು

[ಪೌರಾಣಿಕ ಏಕಾಂಕ ರೂಪಕ]

ಪಾತ್ರ ವಿವರ:

೧. ವಿಷ್ಣು. ೨. ಶಬರ. ೩. ಕುಮಾರ. ೪. ಸೂತ. ೫. ನಾರದ.
೬. ಮಹಾಲಕ್ಷ್ಮಿ. ೭. ಶಬರಿ. ೮. ವಲ್ಲಿ. ೯. ಸಾರಂಗಿ.

ದೃಶ್ಯ ಒಂದು

(ಸ್ಥಳ—ಕ್ಷೀರಸಾಗರ.)

ಮಹಾಲಕ್ಷ್ಮಿ: ಜಗತ್ತಿನಲ್ಲಿ ಎಷ್ಟು ಭೋಗ್ಯ ವಸ್ತುಗಳಿದ್ದರೇನು? ಅವುಗಳ ಸಂತೋಷದಿಂದ ಭೋಗಿಸುವ ಭಾಗ್ಯ ಮಾತ್ರ ಕೈಗೂಡದಿದ್ದರೆ ಎಲ್ಲವೂ ನಿಷ್ಪ್ರಯೋಜಕ! ನನ್ನ ತವರೂರು—ಎಂದರೆ ಅನಂತ ವೈಭವಗಳ ಸಾಗರ. ಇಂದು ಸ್ವರ್ಗೀಯವಾಗಿ ಪ್ರಖ್ಯಾತವಾದ ಐರಾವತ-ಕಾಮಧೇನುಗಳೇ ಮೊದಲಾದ ಸಮಸ್ತ ಸುಖ ಪದಾರ್ಥಗಳೂ ನನ್ನೀ ತಾಯ್ನಾಡಿನ ಗತವೈಭವಗಳು. ಅದೊಂದು ಕಾಲದಲ್ಲಿ ಇವನ್ನೆಲ್ಲ ಅಮರಲೋಕಕ್ಕೊಯ್ದು ನನ್ನ ಪ್ರಭುವು, ನನ್ನನ್ನೂ ಕ್ಷೀರಾಬ್ಧಿ ಗರ್ಭದಿಂದ ಉದ್ಧರಿಸಿ ಸ್ವೀಕರಿಸಿದನು. ಹಲವೊಮ್ಮೆ ನಾನೂ ಅವರ ಹಿಂದೇ ಅವತರಿಸಿ, ಮುಂದೆ ಬರಬಹುದಾದ ವಿಯೋಗದುಃಖವನ್ನು ಪರಿಹರಿಸಿಕೊಂಡುದುಂಟು. ಈಗಲಾದರೋ ಅವರು ಕಣ್ವಮುನಿಯ ಶಾಪಕ್ಕೊಳಗಾಗಿ, ತತ್ಪರಿಹಾರಾರ್ಥವಾಗಿ ಶ್ರೀಗಿರಿಯಲ್ಲಿ ತಪಶ್ಚರ್ಯೆಯಲ್ಲಿ ತೊಡಗಿರುವರು. ಅಸಹನೀಯವಾದ ವಿರಹಚಿಂತೆಯಿದು. ಅವರನ್ನು ಬಿಟ್ಟು ಈ ಬಾಳ್ವೆ ಅರೆಕ್ಷಣಕ್ಕೂ ಸಾರ್ಥಕವೆನಿಸದು. ಇರಲಿ. ಅವರೆಲ್ಲಿದ್ದರೂ ಬಳಿಸೇರುವೆನು. ಮೊದಲು ಒಂದು ಹರಿಣಿಯ ವೇಷವನ್ನು ತಾಳಿ, ಅವರ ಮನಸ್ಸನ್ನು ಸೆರೆಗೊಳ್ಳುವೆನು.

ದೃಶ್ಯ ಎರಡು

(ಸ್ಥಳ—ಶ್ರೀಗಿರಿಯ ತಪ್ಪಲುಪ್ರದೇಶ. ವಿಷ್ಣುವು ಶಿವಯೋಗಿಯಾಗಿ ತಪಸ್ಸು ಮಾಡುತ್ತಿರುವನು. ಲಕ್ಷ್ಮಿಯು ಹರಿಣೀ ನಾಟ್ಯವನ್ನಾಡುತ್ತ ಹಾಡಿಕೊಂಡು ಅವನ ಬಳಿ ಸೇರುವಳು. ಈ ಕೋಲಾಹಲಕ್ಕೆ ಅವನು ಎಚ್ಚೆತ್ತಾಗ ಆಕೆ ಮರೆಯಾಗಿ ದೂರಸರಿಯುವಳು.)

ವಿಷ್ಣು: (ಜಾಗೃತಮನಸ್ಕನಾಗಿ ಸುತ್ತಲೂ ನೋಡಿ) ಎತ್ತಣಿಂದೀ ಗಾನನೃತ್ಯಗಳ ಶಬ್ದವು? ನಿರ್ಜನವಾದ ಪ್ರದೇಶದಲ್ಲಿ ಸೇರಿಕೊಂಡು ಶೈವಯೋಗದಲ್ಲಿ ಮಗ್ನನಾದ ನನಗೆ ಅನಿರೀಕ್ಷಿತವಾದ ಈ ಶಬ್ದಕೋಲಾಹಲವು ತಪೋಭಂಗಕ್ಕೆ ಹೇತುವಾಯಿತಲ್ಲ! ತಪೋಭಂಗ ಮಾಡಿದವರ್ಧಾರಿರಬಹುದು?

(ಯೋಗಾಸನದಿಂದೆದ್ದು ಗಾನಶ್ರವಣದ ಕಡೆಗೆ ಕಿವಿಗೊಡುವನು—ತೆರೆಯ ಮರೆಯಿಂದ ಪುನಃ ಅದೇ ಹಾಡು ಕೇಳಿಸುವುದು)

ವಿಷ್ಣು: ಇದು ಮರ್ತ್ಯಗಾನವಲ್ಲ, ಅಸಾಮಾನ್ಯವಾದ ಅಮರ ಗಾನ. ರಂಭಾ-ತಿಲೋತ್ತಮೆಯರ ಕೈವಾಡವಿರಬಹುದೇ?....ಛೆ! ಅಸಮಂಜಸವು. ಇಲ್ಲಿಗೆ ಬರುವ ಧೈರ್ಯ ಆ ಹೆಂಗಳೆಯರಿಗೆಲ್ಲಿ? ವಿಶ್ವವಿಚಾರನಿವೇದಕರಾದ ನಾರದ-ತುಂಬುರರೇ ಬಂದು ಹಾಡುತ್ತಿರಬಹುದೇ? ಅದೂ ಅಲ್ಲ, ಏಕೆಂದರೆ ಈಗ ಕೇಳಿಸುವುದು ಭಕ್ತಿಗೀತೆಯಲ್ಲ—ಪ್ರೇಮಗೀತೆ.

(ಸ್ವಲ್ಪ ಮುಂದಕ್ಕೆ ಸರಿಯುವನು.)

ತೆರೆಯಲ್ಲಿ—

॥ ಕಂದಪದ್ಯ ॥

ಎಲೆ ಚಕ್ರವಾಕ! ಏತಕೆ?
ಬಳಿಯೊಳೆ ತವವಧುವಿರಲ್ಕಮಂದಭರಿಯುಡಿ-ಹಾ!
ಬಳಲುವೆಯೇಕಧ್ಯಾನದೆ
ಸಲೆ ನೀಂ ಚಿಂತೆಯ ಸಮಾಧಿಯನ್ನೇರ್ದಕಟಾ!

ವಿಷ್ಣು: ಇದಾರು ಹೀಗೆ ನುಡಿಯುತ್ತಿರುವರು? ಎಂತಹ ಅರ್ಥಗರ್ಭಿತ ಮಾತುಗಳಿವು! ಇದರ ಭಾವವನ್ನು ನೆನೆದಂತೆ ನನ್ನ ಹೃದಯವೇ ಸೂರೆಯಾಗುತ್ತಿದೆ ಚಕ್ರವಾಕ ಪಕ್ಷಿಯನ್ನು ಸಂಬೋಧಿಸಿ ಆಡಿದ ನುಡಿಗಳಿವು—ಸಮಾಧಿಸ್ಥನಾದ ನನ್ನನ್ನೇ ಯಾರೋ ಬಂದು ಅಣಕಿಸುತ್ತಿರುವಂತೆ ಧ್ವನಿತವಾಗುತ್ತಿವೆ.

ಲಕ್ಷ್ಮಿ: (ಪ್ರವೇಶಿಸಿ) ಏನು ಯೋಚಿಸುತ್ತೀರಿ ಪ್ರಿಯಕರ? ನಿಮ್ಮರಸಿಯನ್ನೂ ನೀವು ಮರೆತಿರಾ?

ವಿಷ್ಣು: ಇದಾರು ಮಹಾಲಕ್ಷ್ಮಿಯೋ? ಪ್ರಿಯೆ! ಏನಿದು ನಿನ್ನ ಹೊಸ ಅವತಾರ! ನಿನ್ನ ವಿನೋದವಿಹಾರಗಳಿಗೆ ಯಾವಾಗಲೂ ಕೊನೆಯೇ ಇಲ್ಲವಲ್ಲ. ನಾನಿಲ್ಲಿ ಶಾಪಬಂಧಿತನಾಗಿ ತಪಸ್ಸುಮಾಡುತ್ತಿದ್ದೇನೆ— ಇಲ್ಲಿಗೂ ಬಂದು ನಿನ್ನ ಆಟವಾಡತೊಡಗಿದೆಯಲ್ಲ. ಘಹಾ ಚತುರೆ ನೀನು!

ಲಕ್ಷ್ಮಿ: ನಿಮ್ಮ ಈ ಶಿವಯೋಗಿಯ ರೂಪವು ನನಗೆ ಬಹಳವಾಗಿ ಮೆಚ್ಚಿಗೆಯಾಗಿದೆ.

ವಿಷ್ಣು: ಮನೋಹರೆ! ನಿನ್ನ ವೇಷವಾದರೋ ಅದಕ್ಕಿಂತಲೂ ಆಕರ್ಷಕ. ಹರಿಣಿಯ ವೇಷವೆಂಬುದು ನಿನಗೆ ತುಂಬ ಭೂಷಣವೇ ಎನ್ನುವೆನು.

ಲಕ್ಷ್ಮಿ: ಹೃದಯೇಶ್ವರ! ಅತ್ತ ನೋಡಿರಿ. ಆ ಕ್ರೀಡಾಪರ್ವತವು ಎಷ್ಟು ರಮ್ಯವಾಗಿದೆ! ಆ ಜಿಂಕೆಯ ಮರಿಗಳ ಚೆಲ್ಲಾಟವೋ ಬಣ್ಣಿಸತೀರದು. ನಾವೂ ಅಲ್ಲಿಗೈದಿ ಅವುಗಳೊಡನೆ ಪಾಡಿ ನಲಿದಾಡಿ, ರಸನಿಮಿಷಗಳನ್ನು ಸವಿಯೋಣವೇ?

ವಿಷ್ಣು: ಪ್ರಿಯೇ! ಪ್ರಕೃತಿಯ ಆಹ್ವಾನವನ್ನು ಅಲ್ಲಗಳೆವವರಾರು? ಬಾ, ಹೋಗೋಣ.

(ಇಬ್ಬರೂ ಹೋಗುವರು.)

ದೃಶ್ಯ ಮೂರು

(ಸ್ಥಳ—ಕ್ರೀಡಾಪರ್ವತ.)

ಲಕ್ಷ್ಮಿ: ಏನೆಲ್ಲ ಘಟಿಸಿತು! ಪ್ರೇಮಬೀಜವು ಮೊಳೆತು, ಕಟಾಕ್ಷ ಜಲಪಾತಗಳಿಂದ ಚಿಗುರಿ ಸಾಕಷ್ಟು ಬೆಳೆದು ವೃಕ್ಷವಾದಾಗ—ಅದು ಕಾಮಜ ಹೂಬಿಟ್ಟು—ಪುತ್ರ ಪುತ್ರೀರೂಪವಾದ ಫಲವನ್ನು ಕೊಟ್ಟೇಬಿಡುತ್ತದೆ. (ಮಗುವನ್ನು ನೋಡಿ ಕಾತರೆಯಾಗಿ) ಹಾಂ, ಇದೇನು ವಿಚಿತ್ರವು? ಇದು ನನ್ನಂತೆ ಹರಿಣಿಯ ರೂಪದ ಶಿಶುವಾಗಿ ಇಲ್ಲವಲ್ಲ. ಇದು ನರಶಿಶುವು— ಮುಂದೆ ನಾರಿಯಾಗತಕ್ಕದು. ಇದಕ್ಕೆ ಹೇಗೆ ತಕ್ಕ ಸಂಸ್ಕಾರ

ಗಳಸ್ನೊಂದಗಿಸಲಿ? (ಆಲೋಚಿಸಿ) ಹುಂ—ಆಗಲಿ, ಇಲ್ಲೇ ಕಾಡಿನಲ್ಲಿ ಬಿಟ್ಟರೆ ಯಾರಾದರೂ ಶಬರರು ಕೊಂಡೊಯ್ದು ಸಲಹಬಹುದು. ಆದೇ ಒಳ್ಳಿತು. (ಮಗುವನ್ನು ಒಂದು ಲತಾಕುಂಜದೆಡೆಯಲ್ಲಿಟ್ಟು ಮರೆಯಾಗುವಳು.)

ದೃಶ್ಯ ನಾಲ್ಕು

(ಶಬರನ ಪ್ರವೇಶ)

ಶಬರ: (ಸ್ವಗತ—ತನ್ನ ಮನೆಮಾತಿನಲ್ಲಿ) ಈಸರ್ದೇವ್ರು ಅನುಗ್ರಯಿಸ್ದ ಈ ಕಾಡಿನಲ್ಲಿ ಉಣ್ಣೋಕೆ ತಿನ್ನೋಕೆ ಬರೋ ಹಾಂಗೆ ದುಡಿತಿದ್ದೇನೆ. ಆದ್ರೆ ಏನೋ ಭಾಳಾ ದಿವ್ಸಾಗಳಿಂದ ಮನ್ಸಿಗೆ ನೆಮ್ಮದಿ ಅನ್ನೋದೇ ಬರೋಲ್ಲ. ಒಬ್ಬನ್ನಾದ್ರೂ ಮನೇ ಬೆಳಗಿಸೋ ಮಗನ್ನ ಪಡೆಯದ ಈ ಬಾಳ್ವೆಗೆ ಕೊಂಚಾನಾದ್ರೂ ಸುಖಾ ಎಲ್ಲಿಂದ ಬರ್ಬೇಕು? ನಾನು ಸೈಸ್ತಾ ಇದ್ರೆ ನನ್ನಾಕೆಗಂತೂ ಈ ದುಃಖ ಸೈರಿಸೋಕೇ ಅಸಾಧ್ಯ. ದಿನಾಲೂ ನನ್ನಾಕಲ ಮೇಲೆ ಕಣ್ಣೀರಿಳ್ಸಿ ಕೊರಗಿಕೊಳ್ತಾಳೆ. ಈ ದಿನ ಯಾಕೋ ಬೆಳಗ್ಗೆ ಎದ್ದಾಂಗೆ ನನ್ನಾಕೆಗೊಂದು "ರೋದನಾ" ಕೇಳಿಸ್ತಂತೆ. ಆಗ್ಲೇ ನನ್ನನ್ನ ಕರೆದು ಅದು ಏನೆಂತ ಒಮ್ಮೆ ನೀವು ವಿಚಾರ್ಸಿಕೊಂಡು ಬರ್ಬೇಕೆಂದು ಛಲಾಮಾಡ್ತಾಳೆ. ಅದಕ್ಕಾಗಿ ಈಗ ಹುಡುಕಿಕೊಂಡು ಬಂದಿದ್ದೇನಿ. ನೋಡೋಣ. (ಸುತ್ತಲೂ ಇಣುಕುವನು.) ಓಹೋ! ಇಲ್ಲೇ ಒಂದು ಮಗು ಕೂಗ್ತಾ ಇದೆಯಲ್ಲಾ! ನೋಡೋಕ್ಕೆ ಹೆಣ್ಣುಮಗು. ನನ್ನಾಕೆಗೆ ಕೇಳಿಸ್ತಾ ಇದ್ದ "ರೋದನ" ಇಲ್ಲಿಂದ್ಲೇ ಆಗಿರ್ಬೇಕು. ಅಲ್ಲಾ....! ಪುಷ್ಪದಂಥಾ ಮಗೂನ ತಬ್ಬಲಿಯಾಗಿ ಹೀಂಗೆ ಬಿಟ್ಟರೆ ಹೆತ್ತ ಕರುಳು ನೋಯೋದಿಲ್ವೇ? ಎಂತಹ ಕರುಣೆ ಇಲ್ದ ಕಠಿಣೋ!—ಅಂತೂ ಆಳೂ ಕಾಳೂ ಕಾಣದ ಈ ಅಡವೀಲಿ ಇದನ್ನ ಹೀಂಗೆ ಬಿಟ್ಟುಬಿಡೋದು ಒಳ್ಳಿತಲ್ಲ. ಎತ್ತಿಕೊಂಡು ಮನೆಗೆ ಹೋಗೋಣ. ನನ್ ಚಿನ್ನಾ! ನೀ ದೇವರ ಕೂಸು! ಬಾಳು ಅಪ್ಪಾ, ಬೊಲೂ ವರ್ಷ ಭಾಳು! (ಎಂದು ಎತ್ತಿಕೊಂಡು ಹೋಗುವನು.)

ದೃಶ್ಯ ಐದು

(ಸ್ಥಳ—ಶಬರಾಲಯ).

ಶಬರ: ಲೇ ಇದೋ ನೋಡೇ—ಏಸು ದಿನಾ ಕೊರಗ್ತೀ? ಶಂ-ದೇವ್ರು, ಎಳ್ಳಷ್ಟಾದ್ರೂ ದಯಾ ಇಲ್ದೋನೊಂತ ಯಾವಾಗ್ಲೂ ದುರುಗುಟ್ತಾ ಇದ್ದೀ

ಯಲ್ಲ ಕಾಣೆ, ದೇವ್ರೇ ಕೊಟ್ಟಿದ್ದಾನೆ ಈ ಕೂಸನ್ನ. ಇದೂ ದೇವ್ರ ಕೂಸು. ಇನ್ಮೇಲೆ ಚಿಂತೇನ ಮಾಡ್ಕೋಬೇಡ. ಎರಡು ಕುಲಾ ಬೆಳಗಿಸೋ ಈ ಹೆಣ್ಮಗೂನ ನಿನ್ನ ಮನಸ್ಸು ಇದ್ದಾಂಗೆ ನೋಡ್ಕೊಳ್ಳೋ ಭಾರಾ ನಿನ್ದು.

(ಕೊಡುವನು.)

ಶಬರಿ: (ಮಗುವನ್ನು ಸಂತೋಷದಿಂದ ಎತ್ತಿ ಆಡಿಸುತ್ತ) ಎಲ್ಲಿಂದ ಬಂದೆ ನನ್ಚಿನ್ನಾ! ಶಬರ್ ಮನೆ ಬೆಳಗಿಸೋಕೆ ಬಂದ್ಯಾ? (ಮುದ್ದಿಡುವಳು.) ಹೌದ್ರೀ, ನೀವು ನೋಡೋ ವೇಳೆ ಈ ಮಗು ಏನ್ಮಾಡ್ತಾ ಇತ್ತು? ಒಂದೂ ಕತೇ ಸುದ್ದೀ ಅಂದಿರಾ?

ಶಬರ: ಚಿಕ್ಕ ಮಗು ಏನ್ಮಾಡೀತು? ಅಳ್ತಾ ಇತ್ತು. ದೇವ್ರ ಕೂಸೂಂತ ಇದನ್ನ ತಂದ್ಮೇಲೆ ನಮ್ ಮನೆಗೆ ಭಾಗ್ಯದೇವತೇನೇ ಬಂದ್ಹಾಂಗೆ.

ಶಬರಿ: ಬಡೋರ ಮನೆಗೆ ಭಾಗ್ಯಲಕ್ಷ್ಮಿ ಬಾರದೆ ಮತ್ತ್ಯಾರ ಮನೆಗೆ ಬರ್ಬೇಕು? ಅಂದ್ರೂನೂ ಇದು ಎಲ್ಲಿತ್ತು—ಹೇಗೆ—ಅಂತಾದ್ರೂ ಹೇಳಲ್ಲ. ಅದನ್ನೇ ನಾ ಕೇಳಿದ್ದು.

ಶಬರ: ಅದೇ ಕೇಳು ಪೂರಾ ಕತೇನ—ನಾ ಕಲ್ಲು ಮುಳ್ಳು ಎನ್ನದೆ ಹೀಂಗೆ ಹೋಗ್ತಾ ಇರೋ ವೇಳೇಲಿ, ಏನೋ ದೇವರ್ನ ಮೊರೆಯಿಡ್ತಾ ನನ್ ಸಂಕಟಾನ ಅರಿಕೆ ಮಾಡ್ಕೊಳ್ತಿದ್ದೆ. ಅದೇ ಕ್ಷಣ ಈ ಮಗೂನ ಕೂಗು ಕೇಳಿಸ್ತು. ಆದ್ರೂ ಯಾರೋ ತಾಯಿ—ಮಗು ಬಿಡಾರ ಬಿಟ್ಟಿರ್ಬೇಕು—ಅಂತಲೇ ನನ್ನ ಎಣಿಕೆ. ಸಮೀಪಕ್ಕೆ ಹೋಗಿ ನೋಡೋವಾಗ ಹೂವಿನಂಥಾ ಈ ಮಗು ಕಣ್ಣಿಗೆ ಬಿತ್ತು. ಸುತ್ತಲೂ ಇಣಕಿದ್ರೂ ಯಾರೂ ಇಲ್ಲ. ಕೊನೆಗೆ ಯೋಚಿಸೀ ಯೋಚಿಸೀ—ಯಾರ್ಯಾರು ಯಾಕೆ ಬಿಟ್ಹೋಗ್ತಾರೆ?.... ದೇವ್ರೇ ತಂದು ಇಟ್ಟಿದ್ದಾನಂತ ಗ್ರಹಿಸ್ದೆ. ನಾನೇ ಎತ್ತಿಕೊಂಡ್ಮೇಲೆ ನಾನೇ ಏಕೆ ಇದ್ಕೆ "ಅಪ್ಪಾಂತ" ಆಗ್ಬಾರ್ದು....? ಅಂತೆಲ್ಲಾ ಬಗೆದು ತಗೊಂಬಂದೆ. ನೋಡು—ನೆನ್ಸಿದಾಂಗ ಈಟೆಲ್ಲಾ ಕತೆ ನಡ್ದೋಯ್ತು.

ಶಬರಿ: ಅಂದ್ಹಾಂಗೆ ಇದರ ಹೆಸರು ಏನೂಂತ....?

ಶಬರ: ಆ ವಿಷಯಾನೇ? ನಾನೂ ಯೋಚನಾ ಮಾಡಿಲ್ಲ. ಅಂತೂ ನನಗಿದು ಸಿಕ್ಕಿದ್ದು ಒಂದು ಬಳ್ಳೀ-ಪೊದರಿನ ನಡುವೆ. ಅದ್ರಿಂದ "ವಲ್ಲೀ" ಎಂತಲೇ ಹೆಸರಿಡೋಣಾಂತಿದ್ದೇನೆ. ನಿನ್ನ ಅಭಿಪ್ರಾಯಾನೂ ತಿಳಿಸು.

ಶಬರಿ: ಅದೇ ಸೈ. ನನಗೂ ಒಪ್ಪೈತೆ. ಆದರೆ ನಂಗೆ ಮತ್ತೊಂದು ಯೋಚನೆ. ಈ ಮಗೂ ದೊಡ್ಡಾದಾಂಗ ನಾವಿಬ್ರೂನೂ ಕಾಡುಕೆಲ್ಸಕ್ಕಂತ ಹೋದ್ರೆ ನಮ್ಮ "ವಲ್ಲೀ"ಗೆ ಇಲ್ಲಿ ಒಬ್ಳೇ ಸುಮ್ನಿರೋಕೆ ಬೇಸರ ಆಗೋಕಿಲ್ವೆ? ಅದೇನು ಮಾಡೋಣಾಂತ.

ಶಬರ: ಓಹೋ. ಮುಂದಿನ್ವಿಚಾರವೇ?....ಸರಿ! ಅದ್ಕೆ ಅವಳ್ನ ನಂ ಭತ್ತದ ಗದ್ದೆ ಕಾಯೋಕೆ ಬಿಡೋಣ.

ಶಬರಿ: ಹೌದು. ಅದು ಧಾನ್ಯಲಕ್ಷ್ಮಿ—ನಮ್ಮಮ್ಮ ಭಾಗ್ಯಲಕ್ಷ್ಮಿ ಇಬ್ಬರ್ನೂ ಜೊತೆ ಮಾಡ್ಬಿಟ್ರೆ ಯಾವ ಭಯಾ-ಬೇಸರಾನೂ ಇಲ್ಲಾಂತ, ಅಲ್ವೇ?

ಶಬರ: ಹ್ಞಾ! ಹಾಗಂತ ತಿಳ್ಕೊ. ಇನ್ನೆಲ್ಲಾ ದೇವ್ರು ನಡೆಸ್ತಾನೆ ಬಿಡು. ಆದ್ರೆ ದೇವ್ರು ನಡೆಸ್ತಾನೆಂತ ನಂ ಕೆಲ್ಸಾ ಮಾತ್ರ ಬಿಡೋ ಬಾರ್ದು. ಇಷ್ಟೆ. ಮತ್ತೆಲ್ಲಾ ಭಾಗ್ಯ ಇದ್ದಾಂಗೆ ಆಗ್ತೆ.

ದೃಶ್ಯ ಆರು.

[ಕೆಲವು ವರ್ಷಗಳ ನಂತರ. ಸ್ಥಳ: ಬಯಲು ಪ್ರದೇಶ. ಪ್ರಾಯಪ್ರಬುದ್ಧೆಯಾದ ವಲ್ಲಿ ವಿಹರಿಸುತ್ತಿರುವಳು.]

ವಲ್ಲಿ: ಆಹಾ! ಎಂತಹ ಪ್ರಕೃತಿಯ ಸೌಂದರ್ಯವಿದು! ಈ ತಂಗಾಳಿಯ ಬೀಸುವಿಕೆಗೆ ತಕ್ಕಂತೆ ಕಣ್ಮನಗಳೆರಡನ್ನೂ ತಣಿಯಿಸುವ, ಮನೋಹರವಾದ ಹಸುರು ಪೈರಿನ ನೋಟ! ಸುತ್ತಲೂ ಸುಮಧುರ ಸೌರಭವನ್ನು ಸೂಸುತ್ತಿರುವ ಸುಮಗಳು ಸುಂದರಮಾರುತಕ್ಕೆ ನಲಿವ ಈ ರಮಣೀಯತೆ! ಸೌಂದರ್ಯದ ಮೇವನ್ನುಣ್ಣುತ್ತಿರುವ ಪಶುಗಳ ಮೆಲುಕಾಟ! ಇಂತು ಪ್ರಕೃತಿ ದೇವಿಯ ನೃತ್ಯರಂಗದಂತಿರುವ ಈ ಪ್ರದೇಶವನ್ನು ನನ್ನ ವಿನೋದ ವಿಹಾರಗಳಿಗಾಗಿ ಮೀಸಲಿಟ್ಟಿರುವ ತಂದೆಯು ನ್ಯಾಯವಾದ ಒಬ್ಬ ಮನೋಭಿಜ್ಞನೇ ಸರಿ. ಈ ಕಡೆಯೊಂದು ಕರ್ಣಾನಂದವಾಗಿ ಕುಕಿಲುತ್ತಿರುವ ಕೋಗಿಲೆಯ ಕೂಗುದನಿಯು ಯಾರನ್ನು ತಾನೇ ತನ್ಮಯಗೊಳಿಸದು?

ಕುಮಾರ: (ಪ್ರವೇಶಿಸಿ) ಯಾರಿವಳೀ ಕನ್ಯಾಮಣಿ! ಸೌಂದರ್ಯದ ರಸೋದಯದಿಂದ ಅತಿ ರಮಣೀಯಳಾಗಿ ಶೋಭಿಸುತ್ತಿರುವ ನವಯುವತಿ ಈಕೆ—ಈ ಕಾಡುಬಯಲಿನಲ್ಲಿ ಏಕಾಕಿನಿಯಾಗಿ ವಿಹರಿಸುತ್ತಿರಲು ಕಾರಣ

ವೇನು? ಈಕೆಯ ಮುಗ್ಧ ಮನೋಹರತೆಯು ನನ್ನನ್ನು ಮೋಹಪಾಶದಲ್ಲಿ ಜಿಗಿಯುತ್ತಿದೆಯಲ್ಲ! ಆಗಲಿ, ವಿಚಾರಿಸಿ ತಿಳಿಯೋಣ. (ಪ್ರಕಾಶ) ಸುಂದರಿ! ನಿನ್ನ ದರುಶನವು ನನ್ನದೊಂದು ಅಪೂರ್ವವಾದ ಭಾಗ್ಯೋದಯವು! ಬಹಳ ಕಾಲ ಜೇಟೆಯಾಡಿ ಬೇಸತ್ತ ನನಗೆ ನಿನ್ನನ್ನು ಕಂಡಾಗ ಅಮಂದವಾದ ಆನಂದವೇ ಉಕ್ಕಿ ಬಂದಂತಾಯಿತು. ಕನ್ನೆ! ನಿನ್ನ ಹೆಸರೇನು?

ವಲ್ಲಿ: ಅಪರಿಚಿತರಲ್ಲಿ ನಾನೀ ತನಕ ಮಾತಾಡಿದುದಿಲ್ಲ. ದಯ ಮಾಡಿ ನೀವಾರೆಂದು ಮೊದಲು ತಿಳಿಸಿರಿ.

ಕುಮಾರ: ತರುಣಿಯೆದುರು ತರುಣನೇ ನಿಂತಾಗ, ಮಾತಾಡಲು ಬೇರೆ ಪರಿಚಯಗಳು ಬೇಕೇನು?

ವಲ್ಲಿ: ಈ ಮಾತುಗಳು ಏನೇನೋ ಅರ್ಥವನ್ನು ನೀಡುತ್ತಿವೆ.

ಕುಮಾರ: ಅಷ್ಟು ಅರ್ಥವಾದರೆ ಸಾಕು. ನಾನೇ ಕೃತಾರ್ಥನು.

ವಲ್ಲಿ: ಇರಬಹುದು. ಆದರೆ, ನಿಮ್ಮ ಅರ್ಥಗಳು ಅಬಲೆಯಾದ ನನ್ನನ್ನು ಭೀತಿಗೊಳಿಸುತ್ತಿವೆ.

ಕುಮಾರ: ಭೀತಿಯೆ? ಏಕೆ? ನೀನು ಅನಾಥೆಯಾಗಿರುವೆಯಾ? ಭೀತಿಯನ್ನು ಬಿಟ್ಟು ನನ್ನೊಡನೆ ಬಾ. ....ತರಳೆ! ನಿನ್ನ ಹೆಸರನ್ನೂ ಹೇಳಲಾರೆಯಾ....?

ವಲ್ಲಿ: ಅದನ್ನು ತಿಳಿಸಲು ಆತಂಕವಿಲ್ಲ—ನನ್ನ ಹೆಸರು ವಲ್ಲಿಯೆಂದು. ಆದರೆ ದಯವಿಟ್ಟು ಯಾವ ವಿಷಯದಲ್ಲೂ ಅನಧಿಕಾರಿಣಿಯಾದ ನನ್ನೊಡನೆ ಆ ಮೊದಲು ಹೇಳಿದ ಮಾತುಗಳನ್ನು ಮತ್ತೊಮ್ಮೆ ಆಡದಿರಿ.

ಕುಮಾರ: "ಅನಧಿಕಾರಿಣಿ....!" ಏನೆಂದೆ? ಪ್ರಾಯಭರಿತೆಯಾದ ನೀನು ಅನಧಿಕಾರಿಣಿಯೇ?

ವಲ್ಲಿ: ಹೌದು! ನನ್ನ ಯೋಗಕ್ಷೇಮ ವಿಚಾರಕರಾದ ಜನನೀಜನಕರಿರುವತನಕ ನಾನಾಗಿ ಯಾವುದಕ್ಕೂ ಅಧಿಕಾರಿಣಿಯಲ್ಲವು.

ಕುಮಾರ: ಆದರೆ, ಮುಖ್ಯವಾಗಿ ತರುಣ—ತರುಣಿಯರ ಮಾನಸಿಕ—ಒಮ್ಮತವಿಲ್ಲದೆ ಜನನೀ ಜನಕರು ಹೇಗೆ ಆಶೀರ್ವದಿಸಬಲ್ಲರು?

ವಲ್ಲಿ: ಪೂಜ್ಯರೇ! ಪರಾಧೀನೆಯಾದ ಕನ್ಯೆಯನ್ನು ಒಮ್ಮಿಂದೊಮ್ಮೆ ಇಂತಹ ವಾಕ್ ಶೃಂಖಳೆಗಳಿಂದ ಬಂಧಿಸಬೇಡಿರಿ.

ಕುಮಾರ: ಹಾಗಾದರೇನೆನ್ನುವಿ ಮನೋಹರಿ? ಆಶಾಭಂಗದ ತಾಪವನ್ನು ನಾನು ಅನುಭವಿಸಿ ಹೋಗಬೇಕೇನು?

ವಲ್ಲಿ: (ತಲೆವಾಗಿ ಸುಮ್ಮನಿರುವಳು.)

ಕುಮಾರ: (ಸ್ವಗತ) ಛೆ! ಈಕೆಯು ಕೈಗೆ ಬರುವಂತಿಲ್ಲ. ತಾಯ್ತಂದೆಗಳ ಪಾರತಂತ್ರ್ಯಕ್ಕೆ ಬಲಿಯಾಗಿರುವಳಿ(ಕೆ. ಇನ್ನುಳಿದುದು ಒಂದೇ ಉಪಾಯ. ನನ್ನ ತೊಡಕುಗಳಲ್ಲಿ ಯಾವಾಗಲೂ ನನಗೆ ನೆರವಾಗುವವನು ಒಬ್ಬನೇ-ನನ್ನ ಸಹೋದರನಾದ ಲಂಬೋದರ. ಪ್ರಕೃತ ಅವನನ್ನು ನೆನೆದು ತತ್ಸಹಾಯದಿಂದ ಕಾರ್ಯವನ್ನು ಸಿದ್ಧಿಸಿಕೊಳ್ಳುವೆನು. (ಎಂದು ಲಂಬೋದರನನ್ನು ನೆನೆದು ಮರೆಯಾಗುವನು. ಉಗ್ರವಾದ ಆನೆಯ ರೂಪದಿಂದ ಲಂಬೋದರನು ಬಂದು ವಲ್ಲಿಯನ್ನು ಪೀಡಿಸತೊಡಗುವನು)

ವಲ್ಲಿ: (ಭೀತಳಾಗಿ) ಅಯ್ಯೋ ಪ್ರಮಾದವು, ಪ್ರಮಾದವು! ಘೋರಾಕೃತಿಯ ಆನೆಯೊಂದು ಬಂದು ನನ್ನನ್ನು ಮುತ್ತುತ್ತಿರುವುದಲ್ಲ. (ಅತ್ತಿತ್ತ ಧಾವಿಸುವಳು. ಆನೆಯು ಸಮೀಪ ತಲುಪುವುದು.) ಹಾಯ್! ದೀನಳನ್ನು ಯಾರೂ ರಕ್ಷಿಸುವರಿಲ್ಲದಾಯ್ತೆ? ದೈವವೇ! ನಿನ್ನೆದುರಿನ ಈ ಸ್ತ್ರೀಹತ್ಯೆಯು ನಿನಗೆ ಸಹನೆಯೇ?

ಕುಮಾರ: (ಪ್ರವೇಶಿಸಿ) ಭೀರು! ಭಯಗೊಳ್ಳದಿರು. ಧೈರ್ಯವನ್ನು ತಾಳು. ನಿನ್ನನ್ನು ಕೈಹಿಡಿದು ಉದ್ಧರಿಸುವ "ಕುಮಾರ"ನೆಂಬವನಿದೋ ನಿನ್ನ ಬಳಿಯಲ್ಲೇ ಇರುವನು. (ಎಂದು ವಲ್ಲಿಯನ್ನು ತಬ್ಬಿಕೊಂಡು ಆನೆಯನ್ನು ಹೊಡೆದೋಡಿಸುವನು)

ವಲ್ಲಿ: ಕುಮಾರಸ್ವಾಮಿ! ಕೋಮಲ ಹೆಸರು! ಹೆಸರಿಗೆ ತಕ್ಕಂತಹ ಈ ದಯಾರ್ದ್ರಹೃದಯವನ್ನು ಯಾರೂ ಹೊಗಳಲೇ ಬೇಕು. ಜೀಯಾ! ಮೃತ್ಯುಮುಖಕ್ಕೆದುರಾದ ನನ್ನನ್ನು ಮರೆಯಿಂದ ಬಂದು ರಕ್ಷಿಸಿದ ನೀವೇ ಭಾಗ್ಯದೇವತೆ. (ನಮಸ್ಕರಿಸುವಳು)

ಕುಮಾರ: (ಕೈಹಿಡಿದೆತ್ತಿ) ಹೌದು—ಈಗ ನೀನು ನನ್ನ ಕರಗೃಹಿತೆಯೂ ಆಗಿರುವಿ.

ವಲ್ಲಿ: ಸ್ವಾಮೀ! ನಿಮ್ಮ ಮಹೋಪಕೃತಿಯನ್ನು ನಾನೆಂದಿಗೂ ಮರೆಯಲಾರೆ.

ಕುಮಾರ: ವಲ್ಲಿ, ನಿನ್ನ ಈ ತೆರನಾದ ಅನನ್ಯ ಪ್ರೀತಿಗೆ ನಾನು ಕೃತಜ್ಞನಾಗಿರುವೆನು.

ವಲ್ಲಿ: ಪೂಜ್ಯರೇ!.... ಇಷ್ಟರೊಳಗೆ ನನ್ನ ತಂದೆಯವರು ಬರುವ ಹೊತ್ತಾಯಿತು. ನಾನು ಮೆಲ್ಲಗೆ ಅಡಿಯಿಡಲೇ?

ಕುಮಾರ: ಆಗಬಹುದು. ಇನ್ನೊಂದು ಸುದಿನದಲ್ಲಿ ಕಾಣೋಣ.

(ಇಬ್ಬರೂ ಹೋಗುವರು.)

ದೃಶ್ಯ ಏಳು.

[ಸ್ಥಳ: ಶಬರಾಲಯ]

ಸಾರಂಗಿ: ದೇವಿ! ಈ ಕಮಲಪತ್ರದ ವ್ಯಜನವು ನಿನ್ನ ವಿರಹಜ್ವರ ತಪ್ತವಾದ ಅಂಗಗಳನ್ನು ತಣಿಸುತ್ತಿದೆಯೇನು?

ವಲ್ಲಿ: ಎಲ್ಲಿಯ ತಣ್ಪೋ, ಎಂತಹ ಜಿಣ್ಪೋ....? ಏನನೊಂದೂ ಹೇಳಲರಿಯದು.

ಸಾರಂಗಿ: ಹಾಗಾದರೆ ಚಿಗುರಿನ ಶಯ್ಯೆಯನ್ನು ರಚಿಸಲೇ....?

ವಲ್ಲಿ: ಅಂತೂ ಸಖಿ, ಈ ಕೃತ್ರಿಮ ಉಪಚಾರಗಳಿಂದಲೇ ನನ್ನ ಬದುಕು ಸ್ಥಿರವಾದೀತೆಂಬ ಧೈರ್ಯ ನನಗಿಲ್ಲ.

ಸಾರಂಗಿ: ಮತ್ತೆ ಯಥಾರ್ಥವಾದ ಉಪಚಾರವೇನೋ ನೀನೇ ಹೇಳಮ್ಮ.

ವಲ್ಲಿ: ಗೆಳತಿ! ಪರಿಹಾಸ್ಯಗಳಿಗಿದು ಎಡೆಯಲ್ಲ.

ಸಾರಂಗಿ: ಇದೂ ಪರಿಹಾಸ್ಯವೆಂದಾಯಿತೇ ತಾಯಿ? ಹಾಗೆಂದು ಭಾವಿಸದಿರು. ನಿನ್ನ ಸೌಖ್ಯಕ್ಕಾಗಿ ನಾನು ಬೇರಾವ ಯತ್ನವನ್ನು ಕೈಗೊಳ್ಳಬೇಕೆಂದು ಮಾತ್ರ ಕೇಳಿದೆ. ಅದನ್ನಷ್ಟು ತಿಳಿಸಿದರೆ ಖಂಡಿತವಾಗಿಯೂ ಪೂರೈಸಿಕೊಡುವೆನು.

ವಲ್ಲಿ: (ಅರೆಲಜ್ಜೆಯಿಂದ) ಚತುರೆಯಾದ ನಿನಗೆ ನಾನು ತಿಳಿಸಬೇಕಾದುದೇನಿದೆ....?

ಸಾರಂಗಿ: ಹೌದು. ಆದರೂ ನಿನ್ನಂತಹ ಪರತಂತ್ರಳಿಗೆ ಯಾವ ಉಪಾಯವನ್ನೂ ಮಾಡಲು ನನಗೆ ಧೈರ್ಯವಿಲ್ಲ.

ವಲ್ಲಿ: ಸಾರಂಗಿ! ನಾನು ಪರತಂತ್ರಳಾದರೂ ನೀನು ಸರ್ವತಂತ್ರ ಸ್ವತಂತ್ರಳಲ್ಲವೇ? ಆದುದರಿಂದ ಹೇಗಾದರೂ ಮಾಡಿ ಆ ಕುಮಾರ ಸ್ವಾಮಿಯ ದರ್ಶನಭಾಗ್ಯವನ್ನೊಮ್ಮೆ ಒದಗಿಸು.

ಸಾರಂಗಿ: ಆಗಲಿ. ನಿನ್ನ ಚಿತ್ತವೇ ನನ್ನ ಅಭಿಮತ. ನಡೆ. ಜಾಗೃತ ರಾಗಿ ಹೋಗೋಣ. (ಹೋಗುವರು)

ದೃಶ್ಯ ಎಂಟು.

[ಸ್ಥಳ: ಅರಣ್ಯಮಾರ್ಗ. ವಲ್ಲಿ ಮತ್ತು ಸಾರಂಗಿಯರು ಕುಮಾರ ದರ್ಶನ ಕ್ಕಾಗಿ ಅರಣ್ಯದಲ್ಲಿ ಅನ್ವೇಷಿಸುತ್ತಾ ಹೋಗುವರು. ಆಗಲೇ ಕುಮಾರನೂ ರಥಾ ರೂಢನಾಗಿ ಬೇಟೆಯಾಡುತ್ತಾ ಅದೇ ದಾರಿಯಲ್ಲಿ ಬರುವನು.]

ಕುಮಾರ: ಸೂತ! ತಡೆ, ತಡೆ! ಕಡಿವಾಣವನ್ನೆಳೆದು ಹಿಡಿ. ಶಬರ ಕುಮಾರಿಯರು ಈ ದಾರಿಯಾಗಿ ಬರುತ್ತಿರುವರು. ಅವರ ಯೋಗಕ್ಷೇಮ ವನ್ನು ವಿಚಾರಿಸಿಯೇ ಮುಂದೆ ಹೋಗುವುದೊಳ್ಳಿತು.

ಸೂತ: ಪ್ರಭೋ! ನಿಮ್ಮಾಜ್ಞೆಯಂತೆ ರಥವನ್ನು ನಿಲ್ಲಿಸಿರುವೆನು. ಸಾವಕಾಶ—ಇಳಿಯೋಣಾಗಲಿ.

(ಇಬ್ಬರೂ ರಥದಿಂದಿಳಿಯುವರು.)

ವಲ್ಲಿ: (ತಲೆಬಾಗಿ) ಪೂಜ್ಯರಿಗೆ ಅಭಿವಂದನೆಗಳು.

ಕುಮಾರ: ಯಾರು, ವಲ್ಲಿಯೇ? ಅತ್ಯಂತ ಸಂತೋಷವಾಯಿತು. ವಲ್ಲಿ! ಮೃಗಯಾವಿಹಾರದಿಂದ ಆಯಾಸಿತನಾದ ನಾನು ಮೃಗನೇತ್ರೆಯಾದ ನಿನ್ನ ದರ್ಶನದಿಂದ ಆನಂದಿತನಾದೆನು.

ವಲ್ಲಿ: ಎಲ್ಲವೂ ತಮ್ಮ ಪಾದಾನುಗ್ರಹದ ಪರಿಣಾಮ.

ಕುಮಾರ: ಪ್ರಮದಾಮಣಿ! ನಿನ್ನ ಈ ನಿರ್ವ್ಯಾಜ ಭಾವನೆಗಳು ನನ್ನಲ್ಲೊಂದು ಹೊಸ ಹುರುಪನ್ನು ಹುಟ್ಟಿಸುತ್ತಿವೆ. (ಸಾರಂಗಿಯನ್ನು ನೋಡಿ) ಈಕೆ ಯಾರು, ನಿನ್ನ ಸಖಿಯೇ?

ವಲ್ಲಿ: ಹೌದು! ಇವಳೇ ನನ್ನ ಬಾಳಗೆಳತಿಯಾದ ಸಾರಂಗಿಯೆಂಬ ವಳು. ಬೇಡನ ಮಗಳಾದ ನನಗೆ ಬೇಡರ ಹುಡುಗಿಯೋರ್ವಳಾದ ಈಕೆ ಬಾಲ್ಯದಲ್ಲಿಯೇ ನನ್ನ ನೆರಳಸಂತೆ ಜೊತೆ ಸೇರಿದ್ದಳು.

ಸಾರಂಗಿ: (ಎತ್ತಲೋ ಕಿವಿಗೊಡುತ್ತಿದ್ದವಳು ಪಕ್ಕನೆ ತಿರುಗಿ—) ಪೂಜ್ಯರೇ! ಅದೇನು ಕೋಲಾಹಲವು? ಬೇಡರ ತಂಡವೇ ಓಡಿಬರುವಂತೆ ಭಾಸವಾಗುತ್ತಿದೆ.

ವಲ್ಲಿ: ಸಾರಂಗಿ! ನಾವು ಗುಪ್ತವಾಗಿ ಮನೆಯಿಂದ ಬಂದುದರಿಂದ ತಂದೆಯವರು ಸಂಶಯಿತರಾಗಿ ಸದ್ಯ ನಮ್ಮನ್ನು ಹುಡುಕಿಕೊಂಡು, ಗದರಿಸಲು ಬರುತ್ತಿರುವರೋ ಏನೋ....?

ಕುಮಾರ: ಯಾರೋ ಬೇಟೆಯಾಡುವವರಿರಬಹುದು.

ವಲ್ಲಿ: ಅಲ್ಲವು ಜೀಯ! ಈ ಗಜಗಳ ಘೀಂಕಾರ, ಕುದುರೆಗಳ ಹೇಷಾರವ, ಜೊತೆಗೆ ಕೇಳುತ್ತಿರುವ ಜಂಝಾಪುಟ ಧ್ವನಿ, ಇವೆಲ್ಲ ಪರಿಚಿತ ಶಬ್ದಗಳಂತೆಯೇ ಭಾವನೆಯಾಗುತ್ತಿವೆ.

ಕುಮಾರ: ಸಾರಥಿ! ನೀನೊಮ್ಮೆ ಅಲ್ಲಿಯ ವರೆಗೆ ಹೋಗಿ ನೋಡಿಬಾ.

ಸೂತ: ಅಪ್ಪಣೆ. (ಹೋಗುವನು.)

ಕುಮಾರ: ವಲ್ಲಿ, ನೀನೂ ಸಖಿಯೂ ರಥದ ಮರೆಯಲ್ಲಿ ಸಾವಕಾಶವಾಗಿ ಇದ್ದುಕೊಳ್ಳಿರಿ. ನಾನು ವಿಚಾರವೇನೆಂದು ತಿಳಿದು ಅದಕ್ಕೆ ಬೇಕಾದ ಕರ್ತವ್ಯಕ್ಕೆ ಸಿದ್ಧನಾಗುವೆನು.

ವಲ್ಲಿ: ಪೂಜ್ಯರೇ! ಈಗ ಸೇನಾಸಮೇತರಾಗಿ ಬರುತ್ತಿರುವವರು ನನ್ನ ತಂದೆಯವರೇ. ಆದರೆ, ದಯವಿಟ್ಟು, ನ್ಯಾಯನಿವೇದನೆಯಿಂದ ಅವರನ್ನು ಸಾಂತ್ವನಗೊಳಿಸಿ, ನಮ್ಮುಭಯರ ಮಾನವೂ ಉಳಿಯುವಂತೆ ಮಾಡುವಿರಾಗಿ ಪ್ರಾರ್ಥಿಸಿಕೊಳ್ಳುವೆನು.

ಕುಮಾರ: ಆಗಲಿ, ನೀನು ನಿಶ್ಚಿಂತಳಾಗಿ ಮರೆಯಲ್ಲಿರು. ಆದಕ್ಕೆಲ್ಲ ನಾನು ಬೇಕಾದಂತೆ ವರ್ತಿಸಿಕೊಳ್ಳುವೆನು.

[ತೆರೆಯ ಹಿಂದೆ: ಆಯ್ಯೋ! ಅನ್ಯಾಯ! ಅನ್ಯಾಯ! ಸಾಧುಗಳ ಮೇಲೆ ವೃಥಾ ಬೇಡರ ಆಕ್ರಮಣ!!!]

ಕುಮಾರ: (ಆಲಿಸಿ,) ಹಾಂ........? ಇದೇನು? ಸೂತನು ಬೊಬ್ಬಿಡುವಂತೆ ಕೇಳಿಸುತ್ತಿದೆ?........ಬೇಡರ ಆಕ್ರಮಣವಂತೆ........! ಎಂತಹ ಅರ್ಥವಿಲ್ಲದ ದುರ್ಘಟನೆಯಿದು?

ಸೂತ: (ಪ್ರವೇಶಿಸಿ,) ಪ್ರಭೋ! ಯಾವನೋ ಒಬ್ಬ ದುಷ್ಟ ಶಬರನು ಬಿರುಸಾದ ಬಾಣಗಳಿಂದ ವೃಥಾ ನನ್ನನ್ನು ಗಾಯಗೊಳಿಸಿದನು

ಕುಮಾರ: ಸೂತ! ತಡೆ-ಕೊಂಚ ಸೈರಿಸು! ಬರುತ್ತಿರುವ ಆ ದುಷ್ಟನ ಅಧಿಕಾರ ದರ್ಪವು ನನಗೂ ಅರ್ಥವಾಗಿದೆ! ಅದಕ್ಕೀಗಲೇ ಪರಿಹಾರವನ್ನು ಮಾಡುವೆನು ನೋಡು! ರಥದೊಳಗಿನಿಂದ ಆ ಬಿಲ್ಲು ಬಾಣಗಳನ್ನು ತಂದು ಇಲ್ಲಿ ಕೊಟ್ಟುಬಿಡು. ಯಾವನಾ ಧೂರ್ತನು ಮುಂದೊತ್ತಿ ಬರುತ್ತಿರುವನೆಂದು ನೋಡೋಣ!

ಶಬರ: (ಪ್ರವೇಶಿಸಿ) ಏನು ಹರಟುತ್ತಿರುವೆ ಮೂರ್ಖ! ನೋಡ ಬೇಕೇನು ಧೂರ್ತನ ಶಕ್ತಿಯನ್ನು........? ಧೂರ್ತನಂತೆ ಧೂರ್ತ........! ಯಾರು ಧೂರ್ತನೆಂಬುದನ್ನು ಬಲ್ಲೆಯಾ........? ಗುಪ್ತವಾಗಿ ನನ್ನ ಪುತ್ರಿಯ ಮಾನವನ್ನೆ ಅಪಹರಿಸಲೆಣಿಸಿದ ನೀನಲ್ಲವೇ ಧೂರ್ತರ ಧುರೀಣ!

ಕುಮಾರ: ಶಬರ! ಮಾತು ಮುಂದರಿಸಬೇಡ. ವಿಚಾರದ ಸತ್ಯಾಸತ್ಯತೆಗಳನ್ನೂ, ನಿನ್ನ ಭವಿಷ್ಯವನ್ನೂ ಗಣಿಸಿಕೊಂಡು ಮಾತಾಡು........ ಆ ಪೋಲೂ ನಿನಗೆ ನನ್ನ ಮೇಲೆಯೇ ಆಕ್ಷೇಪವಿದ್ದರೆ, ಮತ್ತೆ ನಿನ್ನ ಧಾರ್ಷ್ಟ್ಯವನ್ನು ತೋರಿಸು.

ಶಬರ: ಸಾಕು ಪುತ್ರೀಚೋರ–ನಿನ್ನ ನ್ಯಾಯೋಪದೇಶ! ಯಾರೂ ತಿಳಿಯದ ಹಾಗೆ ನಿನ್ನದೊಂದು ಕಾರ್ಯವನ್ನು ನಡೆಸಿ, ಕೊನೆಗೆ ತಾನೇ ಬುದ್ಧಿವಂತನೆಂದೂ ತಿಳಿದುಕೊಂಡು, ನನಗೀಗ ನ್ಯಾಯ ಬೋಧಿಸ ತೊಡಗಿರುವೆಯಾ?

ಕುಮಾರ: ಇಲ್ಲ........ನಿನಗೆ ನ್ಯಾಯೋಪದೇಶವಲ್ಲ. ಆ ಸೂತನನ್ನು ವೃಥಾ ಗಾಯಗೊಳಿಸಿದುದಕ್ಕಾಗಿ ನಿನಗಾಗಲೇ ತಕ್ಕ ಪ್ರಾಯಶ್ಚಿತ್ತವನ್ನು ಕೈಗೊಳ್ಳಬೇಕಿತ್ತು.

ಶಬರ: ಏನೇನು........? ಸೂತನನ್ನು ಹೊಡೆದುದು ಅಪರಾಧವೆನ್ನುವಿಯಾ? ಎಲವೋ! ಸೂತನೊಬ್ಬನೇ ಏಕೆ? ಆರಾರ ಮನೆತನದ ಮಾನವನ್ನು ಕೆಡಿಸುವ ನಿನ್ನಂತಹ ದುಷ್ಟರ ಸಾವಿರ ಮಂದಿ ಅನುಯಾಯಿಗಳಿದ್ದರೂ, ಅವರೆಲ್ಲ ದಂಡ್ಯರೇ ಹೊರತು ತ್ಯಾಜ್ಯರಲ್ಲ. ಸುಮ್ಮನೆ ನಿಷ್ಪ್ರಯೋಜಕ ಮಾತುಗಳನ್ನಾಡಬೇಡ. ಸಾಧ್ಯವಿದ್ದರೆ ನಿನ್ನ ಪೌರುಷವನ್ನೂ ತೋರಿಸಿಬಿಡು. (ಬಾಣ ಬಿಡುವನು.)

ಕುಮಾರ: ಇದೋ, ಈ ಶರಾಘಾತವನ್ನು ಸಹಿಸಿಕೋ. ನಿನ್ನ ಸಾಮರ್ಥ್ಯವನ್ನೂ ನೋಡಿಬಿಡೋಣ. (ಇಬ್ಬರೂ ಬಹಳ ಹೊತ್ತು ಕದನ

ಹಡೆಸುವರು. ಶಬರನು ತನ್ನ ಬಾಣಗಳನ್ನೆಲ್ಲ ಕಳೆದುಕೊಂಡು ಕೊನೆಗೆ ಖಡ್ಗವನ್ನೆತ್ತುವನು.)

ವಲ್ಲಿ: (ಹುರಿಯಿಂದ ಓಡಿಬಂದು) ಅಪ್ಪಾ!.........ಅಪ್ಪಾ.........! ಬೇಡವು.........ಬೇಡವು. ದಯುವಿಟ್ಟು ಶಾಂತರಾಗಿರಿ. ನನ್ನ ಮೇಲಾದರೂ ಪಯುದೋರಿ ಈ ಹೃದಯೇಶ್ವರರನ್ನು ಮನ್ನಿಸಿ ಕಾಪಾಡಿರಿ. (ಶಬರನು ಸ್ತಂಭಿತನಾಗುವನು.)

ನಾರದ: (ಪ್ರವೇಶಿಸಿ) ಶಬರ! ತಡೆ ತಡೆ! ಕೈಮೀರಬೇಡ. ಇವನಾರು ಗೊತ್ತೇ? ಈತನು ಕೈಹಿಡಿದಿರುವ ನಿನ್ನ ಮಗಳಾದರೂ ಯಾರು ಗೊತ್ತೇ? ಈತನು ಸಾಮಾನ್ಯನೆಂದು ತಿಳಿಯಬೇಡ. ತ್ರಿಜಗದ್ವಂದ್ಯನೂ ತ್ರಿನೇತ್ರನೂ ಆದ ತ್ರಿಪುರಾರಿಯ ತೃತೀಯ ಕುಮಾರನೀತ--"ಕುಮಾರ"ನೆಂಬವನು. ಅಲ್ಲದೆ ಶ್ರೀಗಿರಿಯಲ್ಲಿ ಶಿವಯೋಗಿಯಾಗಿ ಕಣ್ವಮುನಿಯ ಶಾಪದಿಂದಿರುವ ವಿಷ್ಣುವಿಗೆ, ಅಲ್ಲಿ ಬಂದ ಹರಿಣೀ ರೂಪದ ಲಕ್ಷ್ಮಿಯಲ್ಲಿ ಜನಿಸಿದವಳೇ ದೇವಿಯಾದ ಈ ವಲ್ಲಿಯು. ಇಂಥಹ ದೈವೀಕನ್ಯೆಯನ್ನು ದೈವೀಪುರುಷ ನೋರ್ವನು ಮನಸಾ ವರಿಸಿದನೆಂದರೆ, ಅವರಿಗಾಗಿ ಜನಕನೆನಿಸಿದ ನೀನು ಸಂತೋಷಪಡಬೇಕೇ ಹೊರತು, ವೃಥಾ ಸಂಶಯುಚಿತ್ತನಾಗಿ ಇಂತಹ ಅನರ್ಥಗಳನ್ನೆಸಗುವುದು ಅಯೋಗ್ಯವು.

ಶಬರ: ಸ್ವಾಮಿ ನಾರದರೇ!.........ಇದು ಸತ್ಯವೇ.........? ಹಾಗಿದ್ದರೆ ನಾನೇ ಒಬ್ಬ ಮಹಾಪಾಪಿಯಲ್ಲವೇ? ಪರಮೇಶ್ವರನು ಅನುಗ್ರಹಿಸಿದ ಈ ಕಾಡಿನಲ್ಲಿ, ಆತನ ಅನ್ನವನ್ನೇ ತಿಂದುಕೊಂಡು, ಈಗ ಆತನ ಆತ್ಮಜನಿಗೇ ಅನ್ಯಾಯವನ್ನು ಬಗೆದೆನೆಂದಾದರೆ, ಲೋಕದಲ್ಲಿ ನನ್ನಂತಹ ಅಧಮರೂ ಅಸಾಧುಗಳೂ ಇನ್ನಾರಿದ್ದಾರೆ?

ನಾರದ: ಶಬರ! ಅರಿಯದೆ ಮಾಡಿದ ಅಪರಾಧಕ್ಕೆ ಪಶ್ಚಾತ್ತಾಪವೇ ಪ್ರಾಯಶ್ಚಿತ್ತವು. ಆದ್ದರಿಂದ ಮಾಡಿದ ದುಷ್ಕೃತನಕ್ಕಾಗಿ ಈತನ ಪಾದಾರವಿಂದಗಳಿಗೆ ತಲೆವಾಗಿ, ಕ್ಷಮೆಯನ್ನು ಬೇಡಿಕೊ.

ಶಬರ: (ನಮಸ್ಕರಿಸಿ) ಜೀಯ ಕುಮಾರಸ್ವಾಮಿ! ತಮ್ಮ ಅನಂತವಾದ ಮಹಿಮೆಯನ್ನರಿಯದೆ, ಅಕ್ಷಮ್ಯವಾದ ಅಪರಾಧವನ್ನೆಸಗಿದೆನು ನಾನು. ಕೇವಲ ಪುತ್ರಿಯ ಮೇಲಣ ವ್ಯಾಮೋಹವು ನನ್ನ ಬುದ್ಧಿಯನ್ನು ಸ್ವಲ್ಪವೂ ವಿಕಾಸಗೊಳಿಸಲಿಲ್ಲ. ಭಗವನ್! ಈ ಮೂಢಮತಿಯ ಸಹಸ್ರ--ಅಪರಾಧ

ಗಳಿದ್ದರೂ ಮನ್ನಿಸಿ ಕಾಲುಷ್ಯದಿಂದ ಮುಕ್ತನನ್ನಾಗಿ ಮಾಡಿ, ಕಾಪಾಡಬೇಕೆಂದು ವಿನಯದಿಂದ ಬೇಡಿಕೊಳ್ಳುವೆನು

ಕುಮಾರ: ಶಬರಪತಿ! ಎದ್ದೇಳು ಎದ್ದೇಳು! ನಿಶ್ಚಿಂತನಾಗು. ನೀನು ಪ್ರಾಕೃತನಾದರೂ ನಿನ್ನ ಅಪ್ರಾಕೃತ ಬುದ್ಧಿವಂತಿಕೆಗೆ ಮೆಚ್ಚಿದೆನು. ಶುದ್ಧಹೃದಯದಿಂದ ನನ್ನನ್ನು ಭಾವಿಸಕೊಂಡ ನೀನು ಇಷ್ಟರಲ್ಲೇ ಸಮಸ್ತ ಪಾಪಗಳಿಂದಲೂ ಪರಿಹೃತನಾಗಿ ಪುನೀತನಾಗಿರುವೆ. ಈಗ ನಿನ್ನ ಇಚ್ಛಿತವೇನೋ ಅದನ್ನರುಹು.

ಶಬರ: ಸ್ವಾಮಿ! ತಮ್ಮ ಅನುಗ್ರಹವನ್ನು ಬಿಟ್ಟು ನನ್ನ ಅಭೀಷ್ಟ ವಿನ್ನೇನೂ ಉಳಿದಿಲ್ಲ. ನನ್ನ ಮಗಳಾದ ಈ ವಲ್ಲಿಯನ್ನು ತಮ್ಮಂತಹ ಮಹಾನುಭಾವರೇ ವರಿಸಿದರೆಂದಾದ ಮೇಲೆ ನಾನೇ ಕೃತಾರ್ಥನಲ್ಲವೇ?

ಕುಮಾರ: ವ್ಯಾಧೇಶ್ವರ! ಸುತೆಯನ್ನು ಸಕಾಲದಲ್ಲಿ ಯೋಗ್ಯ ವರನಿಗೆ ವಿವಾಹಮಾಡಿಕೊಡುವುದು ಜನಕನಾದ ನಿನ್ನ ಕರ್ತವ್ಯವಾಗಿತ್ತು. ಅದಕ್ಕೆ ತಪ್ಪಿ ಪುತ್ರೀ ಮೋಹಕ್ಕೆ ಬಲಿಬಿದ್ದು ಆಕೆಯನ್ನು ಮನೆಯಲ್ಲೇ ಇಟ್ಟುಕೊಂಡುದರಿಂದ ನೀನು ಇಂತಹ ಅನರ್ಥವನ್ನು ಅನುಭವಿಸಿದೆ. ಆ ನಿನ್ನ ಕರ್ತವ್ಯಬಾಹಿರತೆಯನ್ನು ಎಚ್ಚರಿಸಿ, ನಿನಗೆ ಕರ್ಮೋಪದೇಶವನ್ನು ಕೊಡಲು ನಾನೂ ಹೀಗೆ ಕೃತ್ಯಂತರವನ್ನು ಕೈಗೊಳ್ಳಬೇಕಾಯಿತು.

ಶಬರ: ಪ್ರಭೋ! ಎಲ್ಲವೂ ನನ್ನೀ ಕಾಡುಜನ್ಮದ ಸಂಸ್ಕಾರವಿಲ್ಲದ ಜೀವನದ ಪ್ರತಿಫಲಗಳು. ಆದರೆ ಈಗಲಾದರೂ ನನ್ನ ಮೇಲೆ ದಯದೋರಿ, ನನ್ನಲ್ಲಿ ಸುಜ್ಞಾನವುಂಟಾಗುವಂತೆ ತಾವು ಪ್ರೇರೇಪಿಸಿದುದರಿಂದ ನಾನೇ ಧನ್ಯ.

ನಾರದ: ಕಿರಾತಪತಿ! ನೀನು ಮಹಾಸತಿಯಾದ ಈ ವಲ್ಲಿಯನ್ನು ಮಗಳಾಗಿಯೂ, ದೇವದೇವನಾದ ಈ ಕುಮಾರನನ್ನು ಅಳಿಯನಾಗಿಯೂ, ಪಡೆದುದು— ನಿನ್ನ ಜನ್ಮಜನ್ಮಾಂತರಗಳ ಪುಣ್ಯಶೇಷವು.

ಶಬರ: ಸ್ವಾಮಿ ಋಷಿವರ್ಯ! ಅಂತೂ ಇವೆಲ್ಲ ನನ್ನ ಬಾಳುವೆಯಲ್ಲಿ ಎಂದೆಂದೂ ಮರೆಯಲಾಗದ ಸನ್ನಿವೇಶಗಳು. ಆದರೆ, ಅಜ್ಞಾನದಿಂದ ನಾನು ಅನರ್ಥಕ್ಕೆ ಹೇತುಭೂತನಾದಾಗ— ಆ ಕಾಲಕ್ಕೆ ಸರಿಯಾಗಿ ಬಂದು, ನನ್ನನ್ನೆಚ್ಚರಿಸಿ, ಉಜ್ವಲ ಭವಿಷ್ಯವನ್ನು ನನಗೆ ತೋರಿಸಿಕೊಟ್ಟ ತಮಗಾಗಿ ಈ ದೀನನು ಏನು ಕೃತಜ್ಞತೆಯನ್ನು ಸಲ್ಲಿಸಬೇಕೋ ನಾನರಿಯೆ!

ನಾರದ: ಬೇಡರೊಡೆಯ! ಇದರಲ್ಲಿ ನನ್ನದೇನೂ ಇಲ್ಲ. ಎಲ್ಲವೂ ಈ ಕುಮಾರನ ಲೀಲೆಯು. ಸಕಾಲದಲ್ಲಿ ಕಾಕತಾಳೀಯನಾಗಿ ನಾನು ಬಂದುದೂ, ಅದರಿಂದ ಇಂತಹದೊಂದು ಘಟನೆ ನಡೆದುಹೋದುದೂ— ಇದಕ್ಕೆಲ್ಲ ಈತನ ಇಚ್ಛಾಮಾತ್ರವೇ ಕಾರಣವಲ್ಲದೆ, ಕೇವಲ ನಾನು ಮತ್ತು ನೀನು ಬರಿಯ "ಔಪಾಧಿಕರು....!" ನೋಡದೋ! ದೇವತೆಗಳೂ ಕುಮಾರ ವಲ್ಲಿಯರ ಈ ಮಧುರ ಮಿಲನದ ಸುಮುಹೂರ್ತದಲ್ಲಿ ಶುಭವಾದ್ಯವನ್ನು ಮೊಳಗಿ ಪುಷ್ಪವೃಷ್ಟಿಯನ್ನು ಸುರಿಸುತ್ತಿರುವರು. ಶಬರ! ನಾವೂ ಮಹಾ ಮಹಿಮನಿವನ ಲೀಲೆಯನ್ನು ಹಾಡಿ, ಪಾಡಿ ಕೊಂಡಾಡೋಣ. ನಿಮಗೂ ಮುಂದೆ ಉತ್ತರೋತ್ತರ ಅಭಿವೃದ್ಧಿಯಾಗಲಿ ಸಮಸ್ತ ಸನ್ಮಂಗಲಾನಿ ಭವಂತು.

(ಎಲ್ಲರೂ ಕುಮಾರ—ವಲ್ಲಿಯರನ್ನು ಸ್ತುತಿಸುವರು.)

ಷಡಾನನಂ ಕುಂಕುಮರಕ್ತವರ್ಣಂ-
ಮಹಾಮತಿಂ ದಿವ್ಯ ಮಯೂರವಾಹನಂ ।
ರುದ್ರಸ್ಯ ಸೂನುಂ ಸುರಸೈನ್ಯನಾಥಂ-
ಗುಹಂ ಸದಾ ಶರಣ ಮಹಂ ಪ್ರಪದ್ಯೇ ॥

॥ ಮಂಗಲಂ ॥

ಕ್ಕುರಲ್ (ದ್ವಿ.ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ-II (ದ್ವಿ.ಮು); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಮಾರಾವತಾರ(ದ್ವಿ.ಮು); ೨೭*ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ.ಮುದ್ರಣ]; ೨೯ ಜಾಣ್ಮೆಯ ಒಗಟುಗಳು (ದ್ವಿ.ಮು); ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಪೀಪಾಯಿಗಳು; ೩೬ ಉಪದೇಶ ಶತಕ; ೩೭*ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ.ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ.ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಮ್; ೬೪ ಲೌಕಿಕ ನ್ಯಾಯಗಳು; ೬೫*ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ.ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯*ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ....; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧. ಆದಿಶ್ರೀ ಶಂಕರಾಚಾರ್ಯರ ಜೀವನಚರಿತ್ರೆ (ದ್ವಿ.ಮು.) ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ದ್ವಿ.ಮು.) ೮೩ ಬೆಡಗಿನ ನಾಡು ಕೊಡಗು; ೮೪ ಆಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ. ೯೩ ಹೋಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ; ೧೦೦ ಭಕ್ತಕುಚೇಲ; ೧೦೧ ಉತ್ತರನ ಪೌರುಷ; ೧೦೨ ಕುಮಾರ; ೧೦೩ ಕೇರಳ ಜ್ಯೋತಿಷ. ೧೦೪ ಒಗಟುಗಳ ಗೊಂಚಲು. ೧೦೫ ಊರ-ಔಷಧಿಗಳು; ೧೦೬ ಮದ್ವೆ ಅವಾಂತರ; ೧೦೭ ಜಗತ್ತಿನ ವಿಜ್ಞಾನಿಗಳು; ೧೦೮ ನಮ್ಮ ದೇಶ; ೧೦೯ ಗ್ರಾಮ ಸ್ವಾತಂತ್ರ್ಯ. ೧೧೦. ನಮ್ಮ ಕನ್ನಡನಾಡು. ೧೧೧. ಭಕ್ತ ಧ್ರುವ (ಏಕಾಂಕ ನಾಟಕ); ೧೧೨. ಕರ್ನಾಟಕ ಕವಿಚರಿತ್ರೆ; ೧೧೩. ಬೇಡನ ಮಗಳು.

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

Edited, Printed & Published by K. V. Shenoy
at the Prabhat Printers, Ltd., Mangalore.